**ಓ ಎಸ್ ನಂಃ 117/2018**

**ಪಿ. ಡಬ್ಲ್ಯೂ ಃ 1**

**ದಿಃ 03.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎಸ್ ಸಿ ಆರ್ ವಕೀಲರಿಂದ ಃ**

ನಾನು ಕಲ್ಕೆರೆಯಲ್ಲಿ ವಾಸವಾಗಿದ್ದೇನೆ, ನಾನು ವಿದ್ಯಾಭ್ಯಾಸ ಮಾಡಿಲ್ಲ. ನಾನು ದಾವೆಯನ್ನು ರಾಜು ಮತ್ತು ಚಿಕ್ಕಣ್ಣ ಇವರ ವಿರುದ್ದ ಹಾಕಿದ್ದೇನೆ. ದಾವೆಯನ್ನು ಭಾಗ ಪಡೆಯಲು ಹಾಕಿದ್ದೇವೆ. ನಾವು 5 ಐಟಂ ಸ್ವತ್ತುಗಳಿಗಾಗಿ ದಾವೆ ಮಾಡಿದ್ದೇವೆ. ನಮ್ಮ ತಂದೆ 2021-2022 ರವರೆಗೆ ನ್ಯಾಯಾಲಯಕ್ಕೆ ಬಂದು ಕೇಸ್ ನಡೆಸುತ್ತಿದ್ದರು ಎಂದರೆ ಸರಿ. ಈಗ ಅವರ ಆರೋಗ್ಯ ಚೆನ್ನಾಗಿಲ್ಲ ಅದಕ್ಕಾಗಿ ಅವರ ಪರವಾಗಿ ನಾನು ಸಾಕ್ಷಿ ಹೇಳಲು ಬಂದಿದ್ದೇನೆ. ಯಾವ ಆಧಾರದಲ್ಲಿ ಸಾಕ್ಷಿ ಹೇಳುತ್ತಿದ್ದೀರಾ ಎಂಬ ಪ್ರಶ್ನೆಗೆ ಸ್ವತ್ತುಗಳು ನಮ್ಮದು ಇದ್ದುದ್ದರಿಂದ ಸಾಕ್ಷಿ ಹೇಳುತ್ತಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಹೇಳಲು ನಮ್ಮ ತಂದೆ ಯಾವುದೆ ಪತ್ರ ಬರೆದುಕೊಟ್ಟಿಲ್ಲ. ನಾನು ಮತ್ತು ನಮ್ಮ ತಂದೆ ನೋಟರಿಯವರ ಮುಂದೆ ಹೋಗಿ ಯಾವುದೆ ಪತ್ರ ಮಾಡಿಸಿಲ್ಲ.

ನಿ ಪಿ 1 ಕ್ಕೆ ನಾನು ಮತ್ತು ನಮ್ಮ ತಂದೆ ಸಹಿ ಮಾಡಿಲ್ಲ. ನಿ ಪಿ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ಯಾವುದೆ ದಾಖಲೆ ಕೊಟ್ಟಿಲ್ಲ. ಪ್ರತಿವಾದಿ 1 ರಿಂದ 2 ರವರು 1975 ರಿಂದ ಭದ್ರಾವತಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅವರು ಉದ್ಯೋಗ ಹುಡುಕಿಕೊಂಡು ಹೋಗಿ ಭದ್ರಾವತಿಯಲ್ಲಿ ನೆಲೆಸಿದ್ದಾರೆ ಎಂದರೆ ಸರಿ. ಅವರಿಬ್ಬರು ಭದ್ರಾವತಿ ಪೇಪರ್ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ತಮ್ಮ ಹಂಡತಿ ಮಕ್ಕಳೊಂದಿಗೆ ಅಲ್ಲಿಯೇ ವಾಸವಿದ್ದರು ಎಂದರೆ ಸರಿ. ಅವರಿಗೆ ಸಾಕಷ್ಟು ಸಂಬಳ ಇತ್ತು ಎಂದರೆ ಸರಿಯಲ್ಲ. ಕಡಿಮೆ ಸಂಬಳ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಅವರಿಗೆ 1975 ರಲ್ಲಿ ರೂ. 600 ರಿಂದ 700 ಸಂಬಳ ಕೊಡುತ್ತಿದ್ದರು. 1975 ರಲ್ಲಿ ಅವರು ಭದ್ರಾವತಿಗೆ ಹೋದ ನಂತರ ಪ್ರತ್ಯೇಕ ವಾಸವಾಗಿದ್ದರು ಎಂದರೆ ಸರಿ. ನಾವು ಮತ್ತು ನಮ್ಮ ತಂದೆ ಕಲ್ಕೆರೆಯಲ್ಲಿ ವಾಸವಾಗಿದ್ದೇವು ಎಂದರೆ ಸರಿ. ಎಲ್ಲ ಪ್ರತಿವಾದಿಗಳು ಅವರವರ ಹೆಂಡತಿ ಮತ್ತು ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ. 1980 ರಿಂದ ಅವರು

ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ವ್ಯವಸಾಯ ಮಾಡಿಕೊಡುತ್ತಿದ್ದರು ಎಂದು

ಹೇಳುತ್ತಾರೆ. ವಾಸ ಪ್ರತ್ಯೇಕವಾಗಿದ್ದಾರೆ ಎಂದರೆ ಸರಿ. ನಮ್ಮ ತಂದೆ ವ್ಯವಸಾಯ ಮಾಡಿ ಅವರಿಗೆ ಕೊಡುತ್ತಿದ್ದರು ಎಂದು ತೋರಿಸಲು ದಾಖಲೆಯನ್ನು ಕೊಡುತ್ತೇನೆ. ಆ ಬಗ್ಗೆ ಬೇರೆ ಯಾವುದೆ ದಾಖಲೆ ಇರುವುದಿಲ್ಲ.

ಪ್ರತಿವಾದಿ 1 ರಿಂದ 2 ರವರು ಸುಮಾರು 30 ರಿಂದ 40 ವರ್ಷಗಳ ಕಾಲ ಭದ್ರಾವತಿ ಪೇಪರ್ ಮಿಲ್ ನಲ್ಲಿ ಕೆಲಸ ಮಾಡಿದ್ದಾರೆ ಎಂದರೆ ಸರಿ. ಭದ್ರಾವತಿಯಿಂದ ಕಾಲ್ಕೆರೆ ಸುಮಾರು 300 ಕಿ .ಮೀಟರ್ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂಬರ್ 1 ಇದನ್ನು 1 ನೆ ಪ್ರತಿವಾದಿ ಹೆಸರಿನಲ್ಲಿ ಕ್ರಯಪತ್ರವಾಗಿದೆ ಎಂದರೆ ಸರಿ. ಅವರು ಬುದ್ದಿವಂತರಾಗಿದ್ದರಿಂದ ಅವರ ಹೆಸರಿನಲ್ಲಿ ಕ್ರಯ ಮಾಡಿಸಿದ್ದೇವೆ ಎಂದು ಹೇಳುತ್ತಾರೆ. **ಸದರಿ ಕ್ರಯಪತ್ರವನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು.** ಆ ಸ್ವತ್ತು ಅವರ ಹೆಸರಿಗೆ ಮ್ಯುಟೇಷನ್ ಆಗಿತ್ತು ಎಂದರೆ ಸರಿ. **ಸದರಿ ಎಂ ಆರ್ ನ್ನು ನಿ ಡಿ 2 ಎಂದು ಗುರುತಿಸಲಾಯಿತು.** 1ನೆ ಪ್ರತಿವಾದಿಯ ಹೆಸರಿನಲ್ಲಿ ಇರುವ 2 ಆರ್ ಟಿ ಸಿ ಗಳನ್ನು **ಸಾಕ್ಷಿ ಒಪ್ಪಿಕೂಂಡಿದ್ದರಿಂದ ಅವುಗಳನ್ನು ನಿ ಡಿ 3 ಮತ್ತು ನಿ ಡಿ 4 ಎಂದು ಗುರುತಿಸಲಾಯಿತು.** ದಾವಾ ಐಟಂ ನಂಬರ್ 2 ರ 1 ಎಕರೆ 30 ಗುಂಟೆ ಸ್ವತ್ತು 2 ನೆ ಪ್ರತಿವಾದಿಯ ಹೆಸರಿನಲ್ಲಿ ಕ್ರಯವಾಗಿದೆ ಎಂದರೆ ಸರಿ. ಅದನ್ನು ನಾವೆಲ್ಲರೂ ಸೇರಿ ಅವರ ಹೆಸರಿಗೆ ಕ್ರಯ ಮಾಡಿಸಿದ್ದೇವೆ ಎಂದು ಸಾಕ್ಷಿ ಹೇಳುತ್ತಾರೆ. **ಸದರಿ ಕ್ರಯಪತ್ರವನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 5 ಎಂದು ಗುರುತಿಸಲಾಯಿತು. ಮ್ಯುಟೇಷನ್ ನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ ಡಿ 6 ಎಂದು ಗುರುತಿಸಲಾಯಿತು.**

ಪ್ರತಿವಾದಿ 1 ಮತ್ತು 2 ರವರು ಡಿ ಗ್ರೂಪ್ ನೌಕರರಾಗಿ ಭದ್ರಾವತಿ ಪೇಪರ್ ಮಿಲ್ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರಿಗೆ ಕನ್ನಡದಲ್ಲಿ ಸಹಿ ಮಾಡುವುದನ್ನು ಹೊರತುಪಡಿಸಿದರೆ ಓದು ಬರಹ ಬರುತ್ತಿರಲಿಲ್ಲ ಎಂದರೆ ಸರಿ. ಅವರು ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಹೆಚ್ಚಿನ ವ್ಯವಹಾರ ಜ್ಞಾನ ಇತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ಯಾರು ಸಾಲ ಮಾಡಿಲ್ಲ. ದಾವಾ ಐಟಂ ನಂಬರ್ 1 ಮತ್ತು 2 ರ ಸ್ವತ್ತುಗಳು ಪ್ರತಿವಾದಿ 1 ಮತ್ತು 2 ರವರ ಸ್ವಯಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಐಟಂ ನಂಬರ್ 2 ರಲ್ಲಿ 1 ಎಕರೆ 30 ಗುಂಟೆ

ಸ್ವತ್ತು ಇದೆ ಎಂದರೆ ಸರಿ. ದಾವೆಯಲ್ಲಿ 1 ಎಕರೆ 5 ಗುಂಟೆ ಎಂದು ಬರೆಯಿಸಿದ್ದೇವೆ ಎಂದರೆ ಸರಿ. ದಾವೆ ಹಾಕಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಪ್ರತಿವಾದಿ 1 ಮತ್ತು 2 ರವರು ತಮ್ಮ ಸ್ವತ್ತುಗಳಿಗೆ ನಾವು ತಕರಾರು ಮಾಡುತ್ತಿದ್ದೇವೆ ಎಂದು ಓ ಎಸ್ 361/2017 ಮತ್ತು ಓ ಎಸ್ 362/2017 ಎನ್ನುವ

ದಾವೆಯನ್ನು ನಮ್ಮ ತಂದೆ ಹಾಗೂ ನಮ್ಮ ವಿರುದ್ದ ಹಾಕಿದ್ದರು ಎಂದರೆ ಸರಿ. ಆ ಎರಡೂ ಪ್ರಕರಣಗಳು ಇನ್ನೂ ಚಾಲ್ತಿಯಲ್ಲಿವೆ ಎಂದರೆ ಸರಿ.

ಪ್ರತಿವಾದಿ 1 ಮತ್ತು 2 ರವರು ಐಟಂ ನಂಬರ್ 1 ಮತ್ತು 2 ರ ಸ್ವತ್ತುಗಳು ತಮ್ಮ ಸ್ವಯಾರ್ಜಿತ ಸ್ವತ್ತುಗಳೆಂದು ಅದರಲ್ಲಿ ನಾವು ತೊಂದರೆ ಮಾಡುತ್ತಿದ್ದೇವೆ ಎಂದು ದಾವೆ ಹಾಕಿದ್ದಾರೆ ಎಂದರೆ ಸರಿ. ದಾವ ಐಟಂ ನಂಬರ್ 1 ರ ಪೂರ್ವಕ್ಕೆ ಮೊದಲಿಗೆ ಚಿಕ್ಕನರಸಿಂಹಯ್ಯ ಇವರ ಜಮೀನು ಈಗ ರಾಮಾಂಜನೇಯ ಮತ್ತು ಶಿವಣ್ಣ ಇವರ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ಮೊದಲಿಗೆ ಗೌಡಯ್ಯ ಇವರ ಜಮೀನು ಈಗ ಕಣ್ಣಯ್ಯ ಇವರ ಜಮೀನು ಇರುತ್ತದೆ ಎಂದರೆ ಸರಿ. ಉತ್ತರಕ್ಕೆ 2 ನೆ ಪ್ರತಿವಾದಿ ಸಿ ರಾಜು ಇವರು ಕೊಂಡುಕೊಂಡ ಜಮೀನು ಎಂದರೆ ಸರಿ. ದಕ್ಷಿಣಕ್ಕೆ ಕಾಡಯ್ಯನ ಮಕ್ಕಳ ಜಮೀನು ಎಂದರೆ ಸರಿ. ದಾವಾ ಐಟಂ ನಂಬರ್ 2 ರ ಪೂರ್ವಕ್ಕೆ ನರಸಿಂಹಯ್ಯ ಇವರ ಮಕ್ಕಳ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ಕಣ್ಣಯ್ಯ ಇವರ ಜಮೀನು ಇರುತ್ತದೆ ಎಂದರೆ ಸರಿ. ಉತ್ತರಕ್ಕೆ ಸರ್ಕಾರಿ ಗುಂಡುತೋಪು ಎಂದರೆ ಸರಿ ಮತ್ತು ದಕ್ಷಿಣಕ್ಕೆ 1 ನೆ ಪ್ರತಿವಾದಿ ಕೊಂಡುಕೊಂಡ ಜಮೀನು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರು ಹಾಕಿರುವ ಕೇಸ್ ಸರಿಯಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಮತ್ತು 2 ಇವುಗಳು ಚಿಕ್ಕಣ್ಣ ಇವರಿಗೆ ಸೇರಿದ ಸ್ವತ್ತುಗಳೆಂದರೆ ಸರಿಯಲ್ಲ. ಐಟಂ ನಂಬರ್4 ಮತ್ತು 5 ರ ಸ್ವತ್ತುಗಳು ಮಾತ್ರ ಪಿತ್ರಾರ್ಜಿತ ಸ್ವತ್ತುಗಳೆಂದರೆ ಸರಿಯಲ್ಲ. ಆ ಸ್ವತ್ತುಗಳು ನಮ್ಮ ತಾತನಿಗೆ ಸೇರಿದ್ದವು ಎಂದರೆ ಸರಿ.

ನಮ್ಮ ತಾತನ ಹೆಸರು ಚಿಕ್ಕರಂಗಯ್ಯ ಎಂದು ಇರುತ್ತದೆ. ಅಜ್ಜಿಯ ಹೆಸರು ಹುಚ್ಚಮ್ಮ ಇರುತ್ತದೆ. ಮೊದಲು ನಮ್ಮ ಅಜ್ಜಿ ತೀರಿಕೊಂಡಿದ್ದಾರೆ. ನಮ್ಮ ಅಜ್ಜಿ ತೀರಿಕೊಂಡು 7-8 ವರ್ಷಗಳು ಆದ ನಂತರ ನಮ್ಮ ತಾತ ಚಿಕ್ಕರಂಗಯ್ಯ ತೀರಿಕೊಂಡಿದ್ದಾರೆ ಎಂದರೆ ಸರಿ. ಐಟ ನಂಬರ್ 3 ರಿಂದ 5 ರ ಸ್ವತ್ತುಗಳನ್ನು ನಮ್ಮ

ಅಜ್ಜಿ ತಾತ ಬದುಕಿದ್ದಾಗಲೇ ನಮ್ಮ ತಂದೆ, ಪ್ರತಿವಾದಿಗಳು 1980 ರಲ್ಲಿ ಬಾಯಿಮಾತಿನ ಮೂಲಕ ಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಭಾಗವಾದ ನಂತರ ಅವರವರ ಭಾಗಕ್ಕೆ ಬಂದ ಸ್ವತ್ತುಗಳನ್ನು ಅವರು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಾತ ಮತ್ತು ಅಜ್ಜಿ ಇವರು 1 ನೆ ಪ್ರತಿವಾದಿಯ ಜೊತೆ ಭದ್ರಾವತಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ದಿನಾಂಕ ಃ 24.03.2012 ರಂದು ನಮ್ಮ ತಾತ ತೀರಿಕೊಂಡಿದ್ದಾರೆ ಎಂದರೆ ಸರಿ.

ಈ ಹಂತದಲ್ಲಿ ಎಸ್ ಸಿ ಆರ್ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.